425

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ|| 2, ಸ್ಯ 1889.

"ಪಿ" ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡಿಂಟರು, ಜೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಪ್ರಸಿದ್ಧ ಪತ್ರಿಕೆ.

ತಾರೀಖು 27ನೇ ಫಿಬ್ರವರಿ 1889ನೇ ಇಸವಿ.

ಮೈಸೂರು ಲೋಕಲ್ ಸರ್‌ವಿಸ್ ಮತ್ತು ಪ್ಲೀಡರ್ ಪರೀಕ್ಷೆಗಳು ಜೂನ್ ತಿಂಗಳು 1889ನೇ ಇಸವಿ.

1. ಆಯಾ ಪರೀಕ್ಷೆಗಳಿಗೆ ನೇಮಕವಾಗಿರುವ ವಿಷಯಗಳಲ್ಲಿ ಮುಂದೆ ನಡಿಯತಕ್ಕ ಪರೀಕ್ಷೆಯು, ಬರುವ ಜೂನ್ ತಿಂಗಳು 17ನೇ ತಾರೀಖು ಲಾಗಾಯಿತು ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿರುವ ದುರ್ಬಾರ್‌ಹಾಲ್‌ನಲ್ಲಿಯು, ಮತ್ತು ವೃತ್ತರೋತ್ತರ ಪ್ರಕಟಿಸಲ್ಪಡುವ ಇತರ ಸ್ಥಳಗಳಲ್ಲಿಯು ಜರಗುವವು.

2. ಪರೀಕ್ಷೆಗೆ ಹೋಗತಕ್ಕವರು ಇಂಗ್ಲೀಷ್ ಭಾಷೆಯಲ್ಲಿ ತಯಾರಾಗಿ ಅಚ್ಚು ಹಾಕಿರತಕ್ಕ ಫಾರಂಗಳ ಮೂಲಕ ತಮ್ಮ ಅಪ್ಲಿಕೇಷನ್‌ಗಳನ್ನು ಹಿಸಬೇಕು. ಈ ಫಾರಂಗಳನ್ನು ಈ ಕೆಳಗೆ ರುಜು ಹಾಕಿರತಕ್ಕವರಿಂದ ಪಡೆದು ಬರುವ ಏಪ್ರಿಲ್ 17ನೇ ತಾರೀಖು ಅಥವಾ ಅದಕ್ಕೆ ಪೂರ್ವ ಆವರಿಗೆ ತಲಪುವ ಹಾಗೆ ಕಳುಹಿಸಬೇಕು. ಆ ತಾರೀಖು ಕಳೆದ ತರುವಾಯ ಅಪ್ಲಿಕೇಷನ್‌ಗಳನ್ನು ದಾಖಲ್‌ಮಾಡಿ ಕೊಳ್ಳುವದಿಲ್ಲ.

3. ಇದಕ್ಕೆ ವಿಧಿಸಿರತಕ್ಕ ಫೀ ದರ ಹ್ಯಾಗಂದರೆ:—

ರೆವಿನ್ಯೂ ಪರೀಕ್ಷೆಗೆ		..	..	ರೂಪಾಯಿ 25
ಕ್ರಿಮಿನಲ್	ಡಿಟೋ	..	..	25
ಸಿವಿಲ್	,,	..	..	25
1ನೇ ಗ್ರೇಡ್ ಪ್ಲೀಡರ್	ಪರೀಕ್ಷೆಗೆ	..	..	25
2ನೇ ,,	,,	..	..	15

4. ಹೀಗೆ ನೇಮಕವಾಗಿರತಕ್ಕ ಫೀ ಹಣವನ್ನು ಡಿಪ್ಯುಟಿಕ್ಟ್ರಿ ಆಫೀಸು ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು. ಈ ಫೀ ಪಾವತಿಯಾದದ್ದಕ್ಕಾಗಿ ಖಜಾನೇ ಅಧಿಕಾರಿಗಳ ರಸೀತಿಯನ್ನು ಪಡೆದು ಅದನ್ನು ಅಪ್ಲಿಕೇಷನ್‌ಗೆ ಲಗತ್ತು ಮಾಡಬೇಕು.

5. ಪ್ಲೀಡರ್ ಪರೀಕ್ಷೇಗೆ ನೇಮಕವಾಗಿರತಕ್ಕ ಫೀಯನ್ನು ಪರೀಕ್ಷೆಗೆ ಸಿಪ್ಪಸ್ಸೇಯಾಗಿರುವ ತಾರೀಖಿಗೆ 10 ದಿವಸ ಮುಂಚಿತವಾಗಿ ಯೇ ಜೀಫ್ ಕೋರ್ಟು ರಿಜಿಸ್ಟ್ರಾರ್‌ರವರಲ್ಲಿ ಪಾವತಿ ಮಾಡಬೇಕು.

ಯಲ್. ಅನಂತಸಾಮಿರಾವ್,
ಪರೀಕ್ಷಕರಸಭೆಯ ಕಾರ್ಯದರ್ಶಿ.